ಉ೬೦

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 329

ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 15-02-2024

ಉತ್ತರಿಸುವ ಸಚಿವರ ಹೆಸರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಹುಜೂರ್ ಖಜಾನೆ ಎಂದರೇನು; ಇದನ್ನು ಯಾವಾಗ ಸ್ಥಾಪಿಸಲಾಯಿತು; ಇದರ ಇತಿಹಾಸವೇನು; ಇದರಲ್ಲಿ ಎಷ್ಟು ವಿಧ; ಇದರ ಕಾರ್ಯವೈಖರಿ ಬಗ್ಗೆ ವಿವರವಾದ ಮಾಹಿತಿ ನೀಡುವುದು; | ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇದು ಕರ್ನಾಟಕ ರಾಜ್ಯ ಪುನರ್ ರಚನೆ ಕಾಲದ(1956) ಹಿಂದಿನಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಆಗಿಂದಾಗ್ಗೆ ಪುನರ್ ರಚನೆಗೊಂಡಿರುತ್ತದೆ.<br><br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 27 ರಲ್ಲಿ ವಿವರಿಸಿರುವಂತೆ ರಾಜ್ಯ ಹುಜೂರ್ ಖಜಾನೆಯು ಬೆಂಗಳೂರು ನಗರದಲ್ಲಿ ಪಾವತಿಯಾಗುವ ಎಲ್ಲಾ ವೇತನ, ಸಿಬ್ಬಂದಿ, ಪ್ರಯಾಣ ಭತ್ಯೆ, ಸಾದಿಲ್ವಾರು ಹಾಗೂ ಇತರೆ ಬಿಲ್ಲುಗಳನ್ನು ಪಾವತಿಸುವ ಖಜಾನೆಯಾಗಿರುತ್ತದೆ. ಅದರಂತೆ ಬೆಂಗಳೂರು ನಗರದಲ್ಲಿನ ಸಚಿವಾಲಯ, ನ್ಯಾಯಾಲಯಗಳು ಹಾಗೂ ವಿವಿಧ ಇಲಾಖೆಗಳ ರಾಜ್ಯ ವಲಯದ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತಿದೆ. ರಾಜ್ಯ ಹುಜೂರ್ ಖಜಾನೆ ಹಾಗೂ ಏಜೆನ್ಸಿ ಬ್ಯಾಂಕ್ ಆದ ಆರ್‌ಬಿಐ ನಲ್ಲಿ ಕೆಲಸದ ಒತ್ತಡ ಹೆಚ್ಚಳವಾದುದರಿಂದ 1970 ರಲ್ಲಿ ರಾಜ್ಯ ಹುಜೂರ್ ಖಜಾನೆಯನ್ನು ಪುನರ್ ಸಂಘಟಿಸಲಾಯಿತು. ಅದರಂತೆ ಜಮೆಗಳು, ಠೇವಣಿಗಳು, ಪಿಂಚಣಿ, ಬೆಂಗಳೂರು ವ್ಯಾಪ್ತಿಯ ಉಪ ಖಜಾನೆಗಳು ಇತ್ಯಾದಿ ಕೆಲಸಗಳನ್ನು ನೂತನವಾಗಿ ಸ್ಥಾಪಿಸಲಾದ ಜಿಲ್ಲಾ ಖಜಾನೆಗಳಿಗೆ ವರ್ಗಾಯಿಸಲಾಗಿದೆ.<br><br>ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ: ಆಇ 107 ಆಖಇ 2020 ದಿನಾಂಕ:11.08.2021 ರಲ್ಲಿ ರಾಜ್ಯ ಹುಜೂರ್ ಖಜಾನೆಯನ್ನು ಎರಡು ಭಾಗಗಳಾಗಿ ವಿಭಜಿಸಿ (ರಾಜ್ಯ ಹುಜೂರ್ ಖಜಾನೆ ಹಾಗೂ ಅಪರ ರಾಜ್ಯ ಹುಜೂರ್ ಖಜಾನೆ) ಆದೇಶಿಸಲಾಗಿದೆ. |
| (ಆ) | ಲೆಕ್ಕ ಶೀರ್ಷಿಕೆಗಳು ಅಂದರೇನು; ಇವರುಗಳಲ್ಲಿ ಎಷ್ಟು ವಿಧ; ಅವು ಯಾವುವು; ರಾಜ್ಯ ಸರ್ಕಾರದಲ್ಲಿ ಹಾಲಿ ಜಾರಿಯಲ್ಲಿರುವ ಲೆಕ್ಕ ಶೀರ್ಷಿಕೆಗಳಾವುವು; ಇವುಗಳನ್ನು ಯಾವಾಗಿನಿಂದ ರಾಜ್ಯ ಸರ್ಕಾರದಲ್ಲಿ ಜಾರಿಗೆ ತರಲಾಗಿದೆ; | ಸರ್ಕಾರದ ಜಮೆ ಮತ್ತು ವೆಚ್ಚಗಳನ್ನು ವರ್ಗೀಕರಿಸುವ ಮತ್ತು ದಾಖಲಿಸುವ ಹಾಗೂ ಲೆಕ್ಕ ಮಾಡುವ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆಗಳನ್ನು ಉಪಯೋಗಿಸಲಾಗುತ್ತದೆ. ಭಾರತೀಯ ಸಂವಿಧಾನದ ಅನುಚ್ಛೇಧ 150 ರನ್ವಯ ಸರ್ಕಾರದ ಲೆಕ್ಕಗಳನ್ನು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸುವ ಮತ್ತು ನಿರ್ವಹಿಸುವ ಅಧಿಕಾರವನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ನೀಡಲಾಗಿದೆ. ದಿನಾಂಕ 01.04.1974 ರಿಂದ 3 ಅಂಕಿಯ ಪ್ರಧಾನ ಲೆಕ್ಕ ಶೀರ್ಷಿಕೆ ಉಪಯೋಗಿಸಿ ಲೆಕ್ಕವನ್ನು ನಿರ್ವಹಿಸಲಾಗುತ್ತಿತ್ತು. ಅನಂತರ, ದಿನಾಂಕ 01.04.1987 ರಿಂದ ಜಾರಿಗೆ ಬಂದ ಲೆಕ್ಕ ಪದ್ಧತಿಯನ್ವಯ 4 ಅಂಕಿಗಳ ಪ್ರಧಾನ ಲೆಕ್ಕ ಶೀರ್ಷಿಕೆಯನ್ನು ಅಳವಡಿಸಿಕೊಳ್ಳಲಾಗಿದೆ. ಅದರಂತೆ, ಭಾರತ ಸರ್ಕಾರದ ಲೆಕ್ಕ ಪತ್ರಗಳ ಮಹಾ ನಿಯಂತ್ರಕರ ಸೂಚನೆಯನ್ವಯ ಭಾರತ ಸರ್ಕಾರದ ಮತ್ತು ರಾಜ್ಯಗಳ ರಾಜಸ್ವ ಜಮೆ ಮತ್ತು ವೆಚ್ಚಗಳನ್ನು 15 ಅಂಕಿಗಳ ಲೆಕ್ಕ ಶೀರ್ಷಿಕೆ ಮೂಲಕ ನಿರ್ವಹಿಸಲಾಗುತ್ತಿದೆ.<br><br>ಭಾರತ ಸರ್ಕಾರದ ಲೆಕ್ಕಪತ್ರಗಳ ಮಹಾನಿಯಂತ್ರಕರು, ಸೂಚಿಸುವ ಲೆಕ್ಕ ಶೀರ್ಷಿಕೆಗಳನ್ನು ಕರ್ನಾಟಕ ಸೇರಿದಂತೆ ಎಲ್ಲಾ ರಾಜ್ಯಗಳು |

ಅಳವಡಿಸಿಕೊಂಡಿರುತ್ತವೆ. ಈ 15 ಅಂಕಿಗಳ ಲೆಕ್ಕ ಶೀರ್ಷಿಕೆಯ ವಿವರಗಳು ಕೆಳಕಂಡಂತೆ ಇರುತ್ತದೆ.

ಉದಾಹರಣೆಗೆ:- ಭಾಗ್ಯಲಕ್ಷ್ಮೀ ಯೋಜನೆಯ 15 ಅಂಕಿಯ ಲೆಕ್ಕ ಶೀರ್ಷಿಕೆ:2235-02-102-0-25-100

| ವಿವರ | ಅಂಕಿಗಳು | ಉದಾಹರಣೆಗೆ |
|---|---|---|
| ಪ್ರಧಾನ ಲೆಕ್ಕ ಶೀರ್ಷಿಕೆ (Major Head) | 4 | 2235-ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ |
| ಉಪ ಪ್ರಧಾನ ಲೆಕ್ಕ ಶೀರ್ಷಿಕೆ (Sub Major Head) | 2 | 02-ಸಮಾಜ ಕಲ್ಯಾಣ |
| ಒಳ ಶೀರ್ಷಿಕೆ (Minor Head) | 3 | 102-ಮಕ್ಕಳ ಕಲ್ಯಾಣ |
| ಗುಂಪು ಲೆಕ್ಕ ಶೀರ್ಷಿಕೆ (Group Sub Head) | 1 | 0- |
| ಉಪ ಶೀರ್ಷಿಕೆ (Sub Head) | 2 | 25-ಭಾಗ್ಯಲಕ್ಷ್ಮೀ ಯೋಜನೆ |
| ಉದ್ದೇಶ ಲೆಕ್ಕಶೀರ್ಷಿಕೆ (Object Head) | 3 | 100- ಧನ ಸಹಾಯ |

ಇಲಾಖಾವಾರು ಲೆಕ್ಕ ಶೀರ್ಷಿಕೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

(ಇ) ಸರ್ಕಾರದ ಭದ್ರತಾ ಪತ್ರಗಳು ಎಂದರೇನು: ಇವುಗಳಲ್ಲಿ ಎಷ್ಟು ವಿಧ; ಇವುಗಳಿಗಿರುವ ಮಹತ್ವವೇನು; 2022-2023 ಮತ್ತು 2023-2024 ನೇ ಸಾಲಿನಲ್ಲಿ ಎಷ್ಟು ಭದ್ರತಾ ಪತ್ರಗಳನ್ನು ಎಲ್ಲಿ ಹರಾಜು ಮಾಡಲಾಗಿದೆ; ಇದರಿಂದ ಬಂದ ಹಣವೆಷ್ಟು; ಈ ಹಣವನ್ನು ಯಾವ ಶೀರ್ಷಿಕೆಗೆ ಜಮಾ ಮಾಡಿ ರಾಜ್ಯದ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗಿದೆ; (ವಿವರವಾದ ಮಾಹಿತಿ ನೀಡುವುದು)

ಸರ್ಕಾರಿ ಭದ್ರತಾ ಪತ್ರಗಳು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ವ್ಯವಹರಿಸಲು ಬಳಸುವ ಸಾಧನವಾಗಿದೆ. ಇದು ಸರ್ಕಾರದ ಸಾಲದ ಬಾಧ್ಯತೆಯನ್ನು ಸೂಚಿಸುತ್ತದೆ.

ಸರ್ಕಾರಿ ಭದ್ರತಾ ಪತ್ರಗಳಲ್ಲಿ ಎರಡು ವಿಧ, ಅವುಗಳೆಂದರೆ ಅಲ್ಪಾವಧಿ ಹಾಗೂ ದೀರ್ಘಾವಧಿ ಸರ್ಕಾರಿ ಭದ್ರತಾ ಪತ್ರಗಳು.

ಸಾಮಾನ್ಯವಾಗಿ ಅಲ್ಪಾವಧಿ ಭದ್ರತಾ ಪತ್ರಗಳು ಒಂದು ವರ್ಷಕ್ಕಿಂತ ಕಡಿಮೆ ಅವಧಿಯದ್ದಾಗಿರುತ್ತವೆ. ಇದನ್ನು ಖಜಾನೆ ಬಿಲ್ಲುಗಳು ಎಂದು ಕರೆಯಲಾಗುತ್ತದೆ. ದೀರ್ಘಾವಧಿಯ ಭದ್ರತಾ ಪತ್ರಗಳು ಅಂದರೆ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯದ್ದಾಗಿರುತ್ತದೆ. ಇದನ್ನು ಸಾಮಾನ್ಯವಾಗಿ ಸರ್ಕಾರಿ ಬಾಂಡ್‌ಗಳು ಅಥವಾ dated securities ಎಂದು ಕರೆಯಲಾಗುತ್ತದೆ. ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರವು ಖಜಾನೆ ಬಿಲ್‌ಗಳು ಮತ್ತು ಬಾಂಡ್‌ಗಳನ್ನು ನೀಡುವ ಅಧಿಕಾರ ಹೊಂದಿದೆ. ರಾಜ್ಯ ಸರ್ಕಾರವು ಕೇವಲ ಸರ್ಕಾರಿ ಬಾಂಡ್‌ಗಳು ಅಥವಾ dated securities ನೀಡುವ ಅಧಿಕಾರ ಹೊಂದಿದೆ. ಸರ್ಕಾರವು ಈ ಭದ್ರತಾ ಪತ್ರಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಅಡಮಾನ ಇಡುವ ಮೂಲಕ ಸಾಲಗಳು ಪಡೆಯುತ್ತದೆ.

ಮುಕ್ತ ಮಾರುಕಟ್ಟೆಯಲ್ಲಿ ಸರ್ಕಾರಿ ಭದ್ರತಾ ಪತ್ರಗಳ ಹರಾಜು ಪ್ರಕ್ರಿಯೆಯನ್ನು ರಿಸರ್ವ್ ಬ್ಯಾಂಕ್ ನೋಡಿಕೊಳ್ಳುತ್ತದೆ.

<table>
<tr><td></td><td></td><td>2022-23ರಲ್ಲಿ 16 ಹಾಗೂ 2023-24ರ ಜನವರಿವರೆಗೆ 24 ಸರ್ಕಾರಿ ಭದ್ರತಾ ಪತ್ರಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಹರಾಜು ಮಾಡಲಾಗಿದೆ.<br><br>2022-23ರಲ್ಲಿ ಹಾಗೂ 2023-24ರ ಜನವರಿವರೆಗಿನ ಹಾರಾಜು ಪ್ರಕ್ರಿಯೆಯಲ್ಲಿ ಸ್ವೀಕೃತವಾದ ಹಣ (ಸಾಲ) ಒಟ್ಟು 86,000 ಕೋಟಿ ರೂ.ಗಳು, ಇದನ್ನು ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲಾಗಿದೆ.<br><br>ಈ ಸಾಲದ ಮೊತ್ತವನ್ನು ಆಯವ್ಯಯದ ಲೆಕ್ಕ ಶೀರ್ಷಿಕೆ (Major Head :6003-00-101) ರಡಿ ಲೆಕ್ಕವನ್ನು ಮಾಡಲಾಗುತ್ತದೆ.</td></tr>
<tr><td>(ಈ)</td><td>ಸರ್ಕಾರದ ಭದ್ರತಾ ಪತ್ರಗಳಿಂದ ಬಂದ ಹಣವನ್ನು ಆಯವ್ಯಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆಯೇ; ಹಾಗಾದಲ್ಲಿ ಕೊರತೆ ಬಜೆಟ್ ಎಷ್ಟು; (ವಿವರವಾದ ಮಾಹಿತಿ ನೀಡುವುದು)</td><td>ಆಯವ್ಯಯದಲ್ಲಿ ಅಂದಾಜಿಸಲಾದ ಒಟ್ಟು ವೆಚ್ಚವನ್ನು (ಸಾಲ ಮರುಪಾವತಿ ಹೊರತುಪಡಿಸಿ) ರಾಜ್ಯದ ಒಟ್ಟು ಸ್ವೀಕೃತಿ (ರಾಜಸ್ವ ಹಾಗೂ ಬಂಡವಾಳ ಸ್ವೀಕೃತಿಗಳಿಂದ) ಭರಿಸಲಾಗುವುದು. ಒಟ್ಟು ವೆಚ್ಚ (ಸಾಲ ಮರುಪಾವತಿ ಹೊರತುಪಡಿಸಿ) ಹಾಗೂ ಒಟ್ಟು ಸ್ವೀಕೃತಿಗಳ ವ್ಯತ್ಯಾಸವನ್ನು ವಿತೀಯ ಕೊರತೆ ಎಂದು ಕರೆಯುತ್ತೇವೆ. ಈ ಕೊರತೆಯನ್ನು ಸಾಲ ಪಡೆಯುವ ಮೂಲಕ ಭರಿಸಲಾಗುವುದು. ಸರ್ಕಾರ ಪಡೆಯುವ ಒಟ್ಟು ಸಾಲದಲ್ಲಿ ಸರ್ಕಾರದ ಭದ್ರತಾ ಪತ್ರಗಳ ಹರಾಜಿನಿಂದ ಬಂದ ಹಣವು ಒಳಗೊಂಡಿದೆ.<br><br>ರೂ.ಕೋಟಿಗಳಲ್ಲಿ
<table>
<tr><th>ವಿವರಗಳು</th><th>2022-23</th><th>2023-24 (ಆಯವ್ಯಯ ಅಂದಾಜು)</th></tr>
<tr><td>ಒಟ್ಟು ವೆಚ್ಚವನ್ನು (ಸಾಲ ಮರುಪಾವತಿ ಹೊರತುಪಡಿಸಿ)</td><td>2,76,183</td><td>3,05,306</td></tr>
<tr><td>ಒಟ್ಟು ಸ್ವೀಕೃತಿ (ರಾಜಸ್ವ ಹಾಗೂ ಬಂಡವಾಳ ಸ್ವೀಕೃತಿಗಳು</td><td>2,29,560</td><td>2,38,660</td></tr>
<tr><td>ಕೊರತೆ</td><td>46,622</td><td>66,646</td></tr>
</table></td></tr>
<tr><td>(ಉ)</td><td>ಸರ್ಕಾರದ ಭದ್ರತಾ ಪತ್ರಗಳಿಂದ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಕೂಡ ಅನುದಾನಿತ ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ರಾಜೀನಾಮೆ, ನಿಧನ ಹಾಗೂ ನಿವೃತ್ತಿಗಳಿಂದ ಖಾಲಿಯಾದ ಹುದ್ದೆಗಳನ್ನು ತುಂಬಲು 2015ರವರೆಗೆ ನೀಡಿರುವ ಅನುಮತಿಯನ್ನು 2020ರವರೆಗೆ ವಿಸ್ತರಿಸಲು ಆರ್ಥಿಕ ಇಲಾಖೆಗೆ ಇರುವ ತೊಂದರೆ ಏನು;</td><td rowspan="2">ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ:31.12.2015 ರ ನಂತರ ನಿವೃತ್ತಿ, ನಿಧನ, ರಾಜೀನಾಮೆ ಇತ್ಯಾದಿ ಕಾರಣಗಳಿಂದ ತೆರವಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧದ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>(ಊ)</td><td>ಯಾವ ಕಾಲಮಿತಿಯಲ್ಲಿ ಸರ್ಕಾರ ಈ ಬಗ್ಗೆ ಆದೇಶ ಹೊರಡಿಸುವುದು?</td></tr>
</table>

**ಸಂಖ್ಯೆ: ಆಇ 32 ಆಖಇ 2024**

**(ಸಿದ್ಧರಾಮಯ್ಯ)**

ಮುಖ್ಯಮಂತ್ರಿ